ಕರ್ನಾಟಕ ವಿಧಾನ ಸಭೆ

ಮಂಗಳವಾರ, ೧೯ನೇ ಆಗಸ್ಟ್ ೧೯೬೬

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಘಂಟೆ ೭ ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀ ಡಿ. ಗೋವಿಂದ ದಾಸ್ ಅವರು ದಿನಾಂಕ ೧೮ನೇ ಆಗಸ್ಟ್ ೧೯೬೬ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ೧೯೪೫ ರಿಂದ ೧೯೪೯ರವರೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ೧೯೪೯ರಿಂದ ೧೯೫೦ರವರೆಗೆ ಸಂವಿಧಾನ ಸಭೆಯ ಸದಸ್ಯರಾಗಿ ಹಾಗೂ ೧೯೫೦ರಿಂದ ೧೯೫೧ರವರೆಗೆ ಕರ್ನಾಟಕ ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

ಅಧ್ಯಕ್ಷರು.—ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ರಾಜ್ಯದ ಕಾನೂನಿನ ನೆರವು ವಂಡಳಿಯಲ್ಲಿ ಇತ್ಯರ್ಥವಾದ ಪ್ರಕರಣಗಳ ಬಗ್ಗೆ

೨೧ (೩೧೦) ಶ್ರೀ ಜ್ಞಾನದೇವದೊಡ್ಡಮೇಟಿ (ರೋಣ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕಾನೂನು ನೆರವಿನ ಸಮಿತಿಯು ನೆರವಿನಿಂದ ಇತ್ಯರ್ಥವಾದ ಪ್ರಕರಣಗಳೆಷ್ಟು ಹಾಗೂ ಯಾವ್ಯಾವ ಸ್ವರೂಪದವು ?

ಆ) ರೋಣ ತಾಲ್ಲೂಕಿನ ಕಾನೂನು ನೆರವು ಸಮಿತಿಗೆ ಬಂದ ಪ್ರಕರಣಗಳೆಷ್ಟು, ಹಾಗೂ ಅಲ್ಲಿಯ ಕಾರ್ಯವಿಧಾನ ತೃಪ್ತಿಕರವಾಗಿದೆಯೆ?

ಇ) ಹಾಗಿಲ್ಲದಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎ.ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಆಹಾರ ಮಂತ್ರಿಗಳು)

ಅ) ೨೫೭೭ ಸಿವಿಲ್ ಕ್ರಿಮಿನಲ್, ನ್ಯಾಯಾಧಿಕರಣ ಮತ್ತು ಇತರೆ.

ಆ) ೧೯ ತೃಪ್ತಿಕರವಾಗಿ ಕಂಡು ಬಂದಿಲ್ಲ.

ಇ) ಉಚಿತ ಕಾನೂನು ನೆರವು ನೀಡುವಲ್ಲಿ ಮಹತ್ವವನ್ನು ತಿಳಿಸಿ ಕಾರ್ಯವಿಧಾನ ಚುರುಕುಗೊಳಿಸುವಂತೆ ಕಾರ್ಯದರ್ಶಿ, ರೋಣರವರಿಗೆ ತಿಳುವಳಿಕೆ ಪತ್ರ ಕಳುಹಿಸಲಾಗಿದೆ. ರೋಣ ತಾಲ್ಲೂಕು ಕಾನೂನು ನೆರವು ಸಮಿತಿಯ ಕಾರ್ಯವಿಧಾನವನ್ನು ಪುನಃ ರಚಿಸುವ ವಿಷಯವು ಕರ್ನಾಟಕ ಕಾನೂನು ನೆರವು ಮಂಡಳಿಯ ತೀವ್ರ ಪರಿಶೀಲನೆಯಲ್ಲಿದೆ.

ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕಾನೂನು ನೆರವಿನ ಸಮಿತಿಯು ನೆರವಿನಿಂದ ಇಷ್ಟಾರ್ಥವಾದ ಪ್ರಕರಣಗಳ ಸಂಖ್ಯೆ ೨೫೯೭ ಎಂದು ಇಲ್ಲಿ ಹೇಳಿದೆ. ಇದಕ್ಕೆ ಪೂರಕವಾಗಿ ಮತ್ತೆ ಕೆಲವು ವಿವರಗಳನ್ನು ಕೊಡುತ್ತೇನೆ. ಅದೇನೆಂದರೆ, ನಾವು ಉಚಿತವಾಗಿ ಏನು ಸಲಹೆಗಳನ್ನು ಕೊಡುತ್ತೇವೆ, ಅದೂ ಸಹ ಲೀಗಲ್ ಏಡ್‌ನಲ್ಲಿಯೇ ಬರುತ್ತದೆ. ಹಿರ್ಜಳಿ ಕೇಸ್‌ಗಳಲ್ಲಿ ನಾವು ಉಚಿತವಾಗಿ ಸಲಹೆಗಳನ್ನು ಕೊಟ್ಟಿದ್ದೇವೆ. ಬೆಂಗಳೂರಿನ ಜನತಾ ನ್ಯಾಯಾಲಯದ ಮುಂದೆ ೨೬೬ ಕೇಸ್‌ಗಳನ್ನು ಇತ್ಯರ್ಥ ಮಾಡಿದ್ದೇವೆ. ಇವೆಲ್ಲಾ ಒಟ್ಟು ಸೇರಿದರೆ ೬೭೫೭ ಆಗುತ್ತದೆ. ಇದರ ಜೊತೆಗೆ ತಾಲ್ಲೂಕ್‌ಗಳಲ್ಲಿ ಎಂದರೆ ಕೋರ್ಟುಗಳಿರುವ ಕಡೆಗಳಿರುವ ಕಡೆಗಳಲ್ಲಿ ಉಚಿತ ಕಾನೂನಿನ ನೆರವನ್ನು ಕೊಟ್ಟಿದ್ದೇವೆ. ಇಂತಹ ಪ್ರಕರಣಗಳ ಸಂಖ್ಯೆ ೬೨೮೨. ಇವೆಲ್ಲಾ ಒಟ್ಟು ಸೇರಿ ೧೩,೦೩೯ ಕೇಸ್‌ಗಳಲ್ಲಿ ಉಚಿತವಾಗಿ ಕಾನೂನಿನ ನೆರವನ್ನು ಕೊಡುವುದಕ್ಕೆ ನಮಗೆ ಸಾಧ್ಯವಾಗಿದೆ.

ಶ್ರೀ ಜ್ಞಾನದೇವದೊಡ್ಡಮೇಟಿ.—ಇದರಲ್ಲಿ ಗೇಣಿದಾರರ ಪರವಾಗಿ ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿಯವರೆಗೆ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಕೊಟ್ಟಂತಹ ತೀರ್ಪಿನ ಮೇಲೆ ಕೆಲವರು ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕಿತ್ತಿದ್ದರು. ಆದರೆ ನಾವು ಇತ್ತೀಚೆಗೆ ಮಾಡಿದ ಕಾನೂನಿನ ಅನ್ವಯ ಈ ಕೇಸ್‌ಗಳು ರೆವಿನ್ಯೂ ಅಥಾರಿಟಿ ಮುಂದೆ ಹೋಗುತ್ತವೆ. ಈ ಕೇಸ್‌ಗಳಿಗೆ ಸಂಬಂಧಪಟ್ಟಂತೆ ನಾವು ಎಷ್ಟು ಜನರಿಗೆ ನೆರವು ಕೊಡುವುದಕ್ಕೆ ಸಾಧ್ಯವಾಯಿತು ಎಂಬ ಬಗ್ಗೆ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ನಾನು ಉತ್ತರ ಕೊಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಂ ವಿವಿಧ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ದಾದಿಯಂರು

೨೨ (೧೩೮) ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿರುವ ದಾದಿಗಳ ಸಂಖ್ಯೆ ಎಷ್ಟು ?

ಆ) ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ ೯ ಎಸ್‌ಟಿಆರ್ ೮೪ ಸೆಪ್ಟೆಂಬರ್ ೫, ಇಸವಿ ೧೯೮೫ ರ ಪ್ರಕಾರ ದಾದಿ ಹುದ್ದೆಯವರು ಒಂದು ಸ್ಥಳದಲ್ಲಿ ಅತಿ ಹೆಚ್ಚೆಂದರೆ ಎಷ್ಟು ವರ್ಷ ಕೆಲಸ ಮಾಡಬಹುದೆಂದು ನಿಗಧಿಪಡಿಸಲಾಗಿದೆ?

ಇ) ನಿಗಧಿತ ಅವಧಿ ಮೀರಿ ಎಷ್ಟು ದಾಧಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡ[illegible] ತಲಿದ್ದಾರೆ ?

ಈ) ಹಾಗೆ ನಿಗಧಿತ ಅವಧಿಯೀರಿ ಕೆಲಸ ಮಾಡುತ್ತಿರುವವರನ್ನು ವರ್ಗಾಯಿಸಲಾಗಿದೆಯೇ? ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಆರೋಗ್ಯ ಅಧಿಕಾರಿಗೆ ಆದೇಶ ಏನಾದರೂ ಕಳುಹಿಸಲಾಗಿತ್ತೆ?

ಉ) ಸರ್ಕಾರಿ ಆದೇಶ ಪತ್ರದಂತೆ ಅವರು ನಡೆದುಕೊಳ್ಳದಿದ್ದಲ್ಲಿ ಕಾರಣಗಳೇನಾದರೂ ಇದೆಯೇ ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು).—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿನ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟಿಗೆ ಕೆಲಸ ಮಾಡತ್ತಿರುವ ದಾದಿಯರ ಸಂಖ್ಯೆ ೬೦.

ಆ) ಅಧಿಕೃತ ಜ್ಞಾಪನಾ ಸಂಖ್ಯೆ ಡಿಪಿಎಆರ್ ೯ ಎಸ್‌ಟಿಆರ್ ೮೪ ದಿನಾಂಕ ೫-೯-೮೫ ರ ಪ್ರಕಾರ ಗರಿಷ್ಠ ೫ ವರ್ಷ ಸೇವೆ ಸಲ್ಲಿಸಬಹುದು.